11/3/2018

# ಫ್ರಾನ್ಸ್ ಕಂಪನಿ ಜೊತೆ ಒಪ್ಪಂದ

ಪ್ರಜಾವಾಣಿ ವಾರ್ತೆ

- ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ
- 3ವೇಸ್ಟ್ ಸ್ಮಾಸ್ ಕಂಪನಿ ಜತೆ ಒಪ್ಪಂದ

**ನವದೆಹಲಿ:** ಆನೇಕಲ್ ತಾಲ್ಲೂಕಿನ ಚಿಕ್ಕನಾಗಮಂಗಲ ಬಳಿ ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯು ಶನಿವಾರ ಇಲ್ಲಿ ಫ್ರಾನ್ಸ್ ಮೂಲದ 3ವೇಸ್ಟ್ ಸ್ಮಾಸ್ ಕಂಪನಿ ಜತೆ ಒಪ್ಪಂದ ಮಾಡಿಕೊಂಡಿತು.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಅವರೊಂದಿಗೆ ಭಾರತಕ್ಕೆ ಭೇಟಿ ನೀಡಿರುವ ಫ್ರಾನ್ಸ್‌ನ ವಿದೇಶಾಂಗ ಸಚಿವ ಜೀನ್ ಯೇಸ್ ಲೀ ಡ್ರೇನ್ ಅವರ ಸಮ್ಮುಖದಲ್ಲಿ ಇಲ್ಲಿನ ಪಂಚತಾರಾ ಹೋಟೆಲ್‌ನಲ್ಲಿ ಸಂಜೆ ನಡೆದ ಕಾರ್ಯಕ್ರಮದಲ್ಲಿ, 3ವೇಸ್ಟ್ ಸ್ಮಾಸ್ ಕಂಪನಿ ಜೊತೆ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಹಾಗೂ ಕಂಪನಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ರಾಬರ್ಟ್ ಫಿಲಿಪ್ ಸಹಿ ಹಾಕಿದರು.

ಒಪ್ಪಂದದ ಪ್ರಕಾರ ಅಂದಾಜು ₹ 2,500 ಕೋಟಿ ವೆಚ್ಚದ ಘಟಕವನ್ನು 3 ವೇಸ್ಟ್ ಸ್ಮಾಸ್ ಕಂಪನಿಯೇ ಸ್ಥಾಪಿಸಲಿದ್ದು, ಬಿಬಿಎಂಪಿ ಹಣಕಾಸಿನ ನೆರವು ನೀಡುವುದಿಲ್ಲ. ಆದರೆ, ವಿದ್ಯುತ್ ಉತ್ಪಾದನೆಗಾಗಿ ನಿತ್ಯವೂ ಅಂದಾಜು 500 ಟನ್ ಘನ ತ್ಯಾಜ್ಯವನ್ನು ಕಂಪನಿಗೆ ಪೂರೈಸುವ ಹೊಣೆಗಾರಿಕೆ ಹೊಂದಲಿದೆ. ಅಲ್ಲದೆ, ವಿದ್ಯುತ್ ಉತ್ಪಾದಿಸುವ ಹಕ್ಕುಸ್ವಾಮ್ಯವನ್ನು ಕಂಪನಿಯೇ ಹೊಂದಲಿದೆ.

ತಕ್ಷಣದಿಂದಲೇ ಘಟಕ ನಿರ್ಮಾಣದ ಕಾಮಗಾರಿ ಆರಂಭಿಸಲು ಕಂಪನಿಯು ಒಪ್ಪಿಗೆ ಸೂಚಿಸಿದ್ದು, ಮುಂದಿನ ಏಳು ತಿಂಗಳೊಳಗೆ ವಿದ್ಯುತ್ ಉತ್ಪಾದನೆ ಆರಂಭಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

---

11/3/18

## ಸಣ್ ಸುದ್ದಿ

# ಕಸದಿಂದ ವಿದ್ಯುತ್: ಫ್ರೆಂಚ್ ಕಂಪನಿ ಜತೆ ಪಾಲಿಕೆ ಒಪ್ಪಂದ



**ಬೆಂಗಳೂರು:** ಆನೇಕಲ್ ಬಳಿಯ ಚಿಕ್ಕನಾಗಮಂಗಲದ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ನಿತ್ಯ 500 ಟನ್ ತ್ಯಾಜ್ಯದಿಂದ 10 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ 'ಅತ್ಯಾಧುನಿಕ ವಿದ್ಯುತ್ ಉತ್ಪಾದನಾ ಘಟಕ' ಸ್ಥಾಪಿಸಲು ಬಿಬಿಎಂಪಿ ಮತ್ತು '3 ವೇಸ್ಟ್' ಎಂಬ ಫ್ರೆಂಚ್ ಕಂಪನಿ ನಡುವೆ ಒಪ್ಪಂದ ಏರ್ಪಟ್ಟಿದೆ. ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಮತ್ತು 3 ವೇಸ್ಟ್ ಕಂಪನಿ ಅಧಿಕಾರಿಗಳು ಪರಸ್ಪರ ಒಪ್ಪಂದಕ್ಕೆ ಶುಕ್ರವಾರ ನವದೆಹಲಿಯಲ್ಲಿ ಸಹಿ ಹಾಕಿದರು. ಮೇಯರ್ ಸಂಪತ್ ರಾಜ್ ಉಪಸ್ಥಿತರಿದ್ದರು. ಬಳಿಕ ಮಾತನಾಡಿದ ಆಯುಕ್ತರು, ವಿವಿಧ ಷರತ್ತುಗಳೊಂದಿಗೆ ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಘಟಕ ನಿರ್ಮಾಣಕ್ಕೆ ಬಿಬಿಎಂಪಿಯ ಯಾವುದೇ ಅನುದಾನ ಬಳಕೆ ಮಾಡಲಾಗುವುದಿಲ್ಲ. ಸಂಪೂರ್ಣ ವೆಚ್ಚ 3 ವೇಸ್ಟ್ ಕಂಪನಿಯದ್ದಾಗಿರುತ್ತದೆ. ಅಗತ್ಯ ಜಾಗವನ್ನು ಗುತ್ತಿಗೆ ಮೂಲಕ ಮತ್ತು ನಿಗದಿಪಡಿಸಿದ ಪ್ರಮಾಣದ ತ್ಯಾಜ್ಯವನ್ನು ಉಚಿತವಾಗಿ ಬಿಬಿಎಂಪಿ ಒದಗಿಸಲಿದೆ. ಇದರಿಂದ ನಿತ್ಯ 10 ಮೆ.ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಬೆಂಗಳೂರಿನಲ್ಲಿ ನಿತ್ಯ ಉತ್ಪಾದನೆಯಾಗುತ್ತಿರುವ 4000 ಟನ್‌ನಷ್ಟು ತ್ಯಾಜ್ಯ ನಿರ್ವಹಣೆಗೆ ಬಿಬಿಎಂಪಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದ್ದು, ಇದಕ್ಕಾಗಿ ಪಾಲಿಕೆಯ ತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳನ್ನು ಆರಂಭಿಸಲು ಸರ್ಕಾರದ ಅನುಮತಿ ಕೋರಲಾಗಿತ್ತು. ಸರ್ಕಾರ ಇದಕ್ಕೆ ಬಿಬಿಎಂಪಿ ಮತ್ತು ಸರ್ಕಾರದಿಂದ ಯಾವುದೇ ಹಣಕಾಸಿನ ಹೂಡಿಕೆ ಇಲ್ಲದೆ ಖಾಸಗಿ ಸಂಸ್ಥೆಗಳಿಂದ 'ಯೋಜನೆ ವಿನ್ಯಾಸ, ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ (ಡಿಬಿಒಟಿ) ಆಧಾರದ ಷರತ್ತಿಗೆ ಬದ್ಧ ಅನುಮೋದನೆ ನೀಡಿತ್ತು. ಈ ಷರತ್ತುಗಳನ್ವಯ ಇದೀಗ ಬಿಬಿಎಂಪಿ, ಫ್ರೆಂಚ್ ಕಂಪನಿ ಜತೆ ಒಪ್ಪಂದ ಮಾಡಿಕೊಂಡಿದೆ.

ವಿಜಯ ವಾಣಿ, ಪುಟ ಸಂಖ್ಯೆ-೦೨, 11/03/2018

# ವಿಜ್ಞಾನ ವಿಸ್ಮಯ ಅನಾವರಣ

## ಐಐಎಸ್ಸಿಯಲ್ಲಿ ಓಪನ್ ಡೇ | ಮಾಹಿತಿ ಕಲೆಹಾಕಿದ ವಿಜ್ಞಾನ ಆಸಕ್ತರು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದಿನ ನಿತ್ಯದ ಬಳಕೆಯಲ್ಲಿ ವಿಜ್ಞಾನವನ್ನು ಬಳಸುವ ಅನೇಕ ಸರಳ ವಿಧಾನಗಳು ಶನಿವಾರ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ(ಐಐಎಸ್ಸಿ) ಅನಾವರಣಗೊಂಡಿದೆ.

ಐಐಎಸ್ಸಿ ಆವರಣದಲ್ಲಿ ಆಯೋಜಿಸಿದ್ದ ಓಪನ್ ಡೇ ಕಾರ್ಯಕ್ರಮವು ಸಾರ್ವಜನಿಕರಿಗೆ ಮಳೆಕೊಯ್ಲು, ವಿವಿಧ ರೀತಿಯ ಸರಳ ವಿದ್ಯುತ್ ಉಪಕರಣಗಳ ಬಗ್ಗೆ ಮುಕ್ತವಾಗಿ ತಿಳಿಸಿಕೊಟ್ಟಿತು.

**» ದಿನನಿತ್ಯ ವಿಜ್ಞಾನ ಬಳಸುವ ಸರಳ ವಿಧಾನಗಳ ಪರಿಚಯ**

ಶಾಲೆ ಕಾಲೇಜು ವಿದ್ಯಾರ್ಥಿಗಳು ಸೇರಿ ವಿಜ್ಞಾನ ವಿಷಯಗಳನ್ನು ಅಧ್ಯಯನ ನಡೆಸುತ್ತಿರುವ ಅನೇಕ ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೂ ಭರಪೂರ ಮಾಹಿತಿ ಒದಗಿಸಿತು.

ಬೆಳಕು, ಮೋಟಾರ್, ನೀರು ಶುದ್ಧೀಕರಣ ಸೇರಿ ವಿವಿಧ ಬಗೆಯ ವಿಜ್ಞಾನದ ಪ್ರಯೋಗಗಳು, ಗಣಿತದ ಸಮಸ್ಯೆಗಳನ್ನು ಸರಳ ರೂಪದಲ್ಲಿ ಬಗೆಹರಿಸುವುದು, ರಾಕೆಟ್ ಉಡಾವಣೆ, ರಾಕೆಟ್‌ಗಳ ಸಿದ್ಧಪಡಿಸುವ ವಿಧಾನ, ಉಡಾವಣೆ ಸಂದರ್ಭದ ವಿಚಾರ, ಉಪಗ್ರಹಗಳ ಕಾರ್ಯನಿರ್ವಹಣೆ, ಉಪಗ್ರಹಗಳ ಜೀವಿತಾವಧಿ ಇತ್ಯಾದಿ ವಿಜ್ಞಾನದ ಅನೇಕ ಸಂಗತಿಗಳನ್ನು ಪ್ರಾಯೋಗಿಕ ಹಾಗೂ ಪ್ರಾತ್ಯಕ್ಷಿಕೆಗಳ ಮೂಲಕ ಪ್ರಸ್ತುತ ಪಡಿಸಲಾಗಿದೆ.

ನಿಂಬೆ, ಬಾಳೆಹಣ್ಣು, ಆಲೂಗಡ್ಡೆಯಲ್ಲಿರುವ ರಾಸಾಯನಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿಸುವುದು, ಇದರಿಂದ ಲೈಟ್ ಉರಿಸುವುದು, ಮಳೆಕೊಯ್ಲು ವಿಧಾನ ಅನುಸರಿಸುವುದು ಇತ್ಯಾದಿ ಅನೇಕ ಪ್ರಯೋಗಗಳನ್ನು ಸ್ಥಳದಲ್ಲೇ ಐಐಎಸ್ಸಿ ವಿದ್ಯಾರ್ಥಿಗಳು ಏರ್ಪಡಿಸಿ, ಶಾಲಾ ಮಕ್ಕಳಿಗೆ ವಿವರಿಸುವ ದೃಶ್ಯ ಕಂಡು ಬಂತು.



ಐಐಎಸ್ಸಿ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಓಪನ್ ಡೇ ಕಾರ್ಯಕ್ರಮಕ್ಕೆ ಆಗಮಿಸಿದ ವಿಜ್ಞಾನ ವಿಷಯದಲ್ಲಿ ಅಧ್ಯಯನ ನಡೆಸುತ್ತಿರುವ ಶಾಲಾ-ಕಾಲೇಜು ವಿದ್ಯಾರ್ಥಿಗಳು, ವಿವಿಧ ಪ್ರಯೋಗ ವೀಕ್ಷಿಸಿದರು.



ನ್ಯಾನೋ ಸೈನ್ಸ್ ಮತ್ತು ಇಂಜಿನಿಯರಿಂಗ್, ಆಟ್ಮೊಸ್ಪೇರ್ ಮತ್ತು ಓಷನ್ ಸೈನ್ಸ್, ಬಯೊ ಸಿಸ್ಟಮ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಕ್ರಯೊಜಿನ್ ಟೆಕ್ನಾಲಜಿ, ಬಯೊ ಕೆಮೆಸ್ಟ್ರಿ, ಹೈ ಎನರ್ಜಿ ಫಿಸಿಕ್ಸ್, ಮೂಲಸೌಕರ್ಯ, ಸುಸ್ಥಿತ ಸಾರಿಗೆ ಮತ್ತು ನಗರ ಯೋಜನೆ ವಿಭಾಗ ಸೇರಿ ಐಐಎಸ್‌ಸಿಯ ಪದವಿ, ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರದಿಂದ ಆಯಾ ಕ್ಷೇತ್ರದ ಪ್ರಾತ್ಯಕ್ಷಿಕೆ, ಪ್ರದರ್ಶಿನಿಗಳನ್ನು ಏರ್ಪಡಿಸಲಾಗಿತ್ತು. ಇದಲ್ಲದೆ ಸಂಸ್ಥೆಯ ಪ್ರತಿ ವಿಭಾಗದಲ್ಲಿ ಈವರೆಗೆ ಮಾಡಿರುವ ಪ್ರಮುಖ ಪ್ರಯೋಗಗಳು, ಹೊಸ ಸಂಶೋಧನೆಗಳನ್ನು ಪ್ರದರ್ಶಿಸಿ, ವಿದ್ಯಾರ್ಥಿಗಳು ಅಗತ್ಯ ವಿವರಣೆ ನೀಡಿದರು. ಬೆಳಗ್ಗೆ 9 ರಿಂದ ಸಂಜೆ 5 ವರೆಗೆ ಐಐಎಸ್ಸಿ ಕ್ಯಾಂಪಸ್‌ನಲ್ಲಿ ಮಕ್ಕಳು, ಮಹಿಳೆಯರು, ಪುರುಷರು, ವಯಸ್ಕರು ಹೀಗೆ ಎಲ್ಲ ವಯೋಮಾನದವರು ವಿಜ್ಞಾನದ ವಿವಿಧ ಸಂಗತಿಗಳನ್ನು ಅರಿತುಕೊಂಡರು.

---

Pg-4, 11-03-18 Udayavani



**ನವದೆಹಲಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರಿನಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ನಿರ್ಮಾಣ ಕುರಿತ ಒಡಂಬಡಿಕೆಗೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಹಾಗೂ ಫ್ರಾನ್ಸ್ ದೇಶದ ವೆಲ್ಸೈಟ್ ಸಂಸ್ಥೆಯ ಸಿಇಒ ರಾಬರ್ಟ್ ಆರ್. ಫಿಲಿಪ್ ಅವರು ಸಹಿ ಹಾಕಿದರು.**

---

ವಿಜಯ ವಾಣಿ, 11/03/2018 ಪುಟ ಸಂಖ್ಯೆ-15

## ವಿನೂತನ ಯೋಜನೆಗಳು

- ಆಲಮಟ್ಟಿ ಬಲದಂಡೆ ಕಾಲುವೆ ಮೇಲೆ 1 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ಪ್ಯಾನಲ್ ಅಳವಡಿಕೆಯ ಪೈಲಟ್ ಯೋಜನೆ ಕಾರ್ಯಾರಂಭ
- ಕೇಂದ್ರ ಸರ್ಕಾರದ ಹೊಸ ಹಾಗೂ ನವೀಕರಿಸಬಹುದಾದ ಇಂಧನ ಸಚಿವಾಲಯದ ಸಹಾಯಧನದಡಿ ಕೊಪ್ಪಳ ಏತ ನೀರಾವರಿ ಯೋಜನೆಯ, ಇನ್‌ಟೇಕ್ ಗ್ರಾವಿಟಿ ಕೆನಾಲ್ ಮೇಲೆ 10 ಮೆ.ವ್ಯಾ ಸೋಲಾರ್ ವಿದ್ಯುತ್ ಉತ್ಪಾದನೆಗೆ ಯೋಜನಾ ಕಾಮಗಾರಿಯನ್ನು ಖಾಸಗಿ ಸಹಭಾಗಿತ್ವದಡಿ DBFOT ಆಧಾರದಲ್ಲಿ 25 ವರ್ಷಗಳ ಕಾಲಾವಧಿಗೆ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

# ಭಾರತವು ಸ್ಥಾಪನಾ ಸಮ್ಮೇಳನದ ಆತಿಥ್ಯವನ್ನು ಹೆಮ್ಮೆಯಿಂದ ವಹಿಸುತ್ತಿದೆ

## INTERNATIONAL SOLAR ALLIANCE

**11ನೇ ಮಾರ್ಚ್ 2018 । ರಾಷ್ಟ್ರಪತಿ ಭವನ । ನವದೆಹಲಿ**



**ಅಂತಾರಾಷ್ಟ್ರೀಯ ಸೌರ ಒಕ್ಕೂಟವು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ದೂರದೃಷ್ಟಿಯ ಫಲವಾಗಿದೆ. ಸೌರಶಕ್ತಿಯನ್ನು ಕೊಯ್ಲು ಮಾಡಲು ಜಗತ್ತನ್ನು ಒಗ್ಗೂಡಿಸುವುದು ಮತ್ತು ಜನಸಮುದಾಯಕ್ಕೆ ಕೈಗೆಟಕುವ ದರದಲ್ಲಿ ಈ ವಿಶ್ವವ್ಯಾಪಿ ಸೌರಶಕ್ತಿಯ ಸಂಪರ್ಕವನ್ನು ಒದಗಿಸುವುದು ಇದರ ಉದ್ದೇಶವಾಗಿದೆ.**

SIXTY SIGNATORY COUNTRIES



ಅಂತಾರಾಷ್ಟ್ರೀಯ ಸೌರ ಒಕ್ಕೂಟವು ಪ್ರಪ್ರಥಮ ಒಪ್ಪಂದ ಆಧಾರಿತ ಅಂತಾರಾಷ್ಟ್ರೀಯ ಅಂತರ್‌ಸರಕಾರಿ ಸಂಘಟನೆಯಾಗಿದ್ದು ಅದರ ಕೇಂದ್ರ ಕಚೇರಿಯನ್ನು ಭಾರತ ಹೊಂದಲಿದೆ. ಉಷ್ಣವಲಯದಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಸ್ಥಿತವಾಗಿರುವ ಸೌರಶಕ್ತಿ ಸಂಪನ್ಮೂಲ ಭರಿತ ರಾಷ್ಟ್ರಗಳ ಒಕ್ಕೂಟ ಇದಾಗಿದೆ. ಈ ಉಪಕ್ರಮದ ಮೂಲಕ ಸೌರಶಕ್ತಿ ಬಳಕೆ ಪ್ರಮಾಣವನ್ನು ಹೆಚ್ಚಿಸಲು ಸದಸ್ಯ ರಾಷ್ಟ್ರಗಳು ಸಾಮೂಹಿಕವಾಗಿ ಉಪಾಯಗಳನ್ನು ರೂಪಿಸುವವಲ್ಲದೇ ಸಾಮಾನ್ಯವಾಗಿ ಎದುರಾಗುವ ಪ್ರಮುಖ ಸವಾಲುಗಳನ್ನು ಪರಿಹರಿಸಲು ಪ್ರಯತ್ನಿಸುವವು.

ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ

ವಿದೇಶ ವ್ಯವಹಾರಗಳ ಸಚಿವಾಲಯ